ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **1012 /2023**

| | | |
|---|---|---|
| ಸಾಕ್ಷಿಯ ಹೆಸರು | : ಪುನೀತ್ | ಸಿ.ಡಬ್ಲ್ಯು 4 |
| ತಂದೆಯ ಹೆಸರು | : ಕಲ್ಲೇಶಪ್ಪ | ಪಿ.ಡಬ್ಲ್ಯು 2 |
| ವಯಸ್ಸು | : 32 ವರ್ಷ | |
| ಉದ್ಯೋಗ | : ಪೊಲೀಸ್ ಪೇದೆ | |
| ವಾಸ ಸ್ಥಳ | : ತರೀಕೆರೆ | |

ದಿನಾಂಕಃ**22-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2017 ರಿಂದ 2023 ರ ಮಧ್ಯದಲ್ಲಿ ತರೀಕೆರೆಯಲ್ಲಿ ಪೊಲೀಸ್ ಪೇದೆ ಆಗಿ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ 15-09-2022 ರಂದು ಸಂಜೆ 5-30 ರ ಸಮಯದಲ್ಲಿ ನಾನು ಠಾಣೆಯಲ್ಲಿ ಇದ್ದಾಗ ಚಾಸಾ-1 ರವರಿಗೆ ಚಾಸಾ-5 ರವರು ನಮ್ಮ ಠಾಣಾ ವ್ಯಾಪ್ತಿಯ ಬೆಟ್ಟದಹಳ್ಳಿ ಗ್ರಾಮದಲ್ಲಿ ಪ್ರವೀಣ್ ಎಂಬ ವ್ಯಕ್ತಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಭಾತ್ಮಿ ಬಂದಿದೆ ಎಂದು ತಿಳಿಸಿದಾಗ ನಾನು ಮತ್ತು ಚಾಸಾ-1 ರವರು ಇಲಾಖಾ ಬೈಕ್ ನಲ್ಲಿ ಮಾಹಿತಿ ಬಂದ ಸ್ಥಳದ ಕಡೆಗೆ ಹೊರಟೆವು. ಸಂಜೆ 6-00 ಗಂಟೆ ಸಮಯಕ್ಕೆ ಬೆಟ್ಟದಹಳ್ಳಿ ಗ್ರಾಮದ ದೇವಸ್ಥಾನದ ಬಳಿ ಚಾಸಾ-1 ರವರು, ಚಾಸಾ-2 ಮತ್ತು 3 ಇವರನ್ನು ಬರಮಾಡಿಕೊಂಡು ವಿಷಯ ತಿಳಿಸಿ ಪಂಚರಾಗಲು ಒಪ್ಪಿಸಿದರು. ಅವರುಗಳೊಂದಿಗೆ ನಾವು ಬೆಟ್ಟದಹಳ್ಳಿ ಗ್ರಾಮದಲ್ಲಿ ನಿರ್ಮಾಣ ಆಗುತ್ತಿರುವ ಬ್ರಿಡ್ಜ್ ಪಕ್ಕದಲ್ಲಿ ಬೈಕನ್ನು ನಿಲ್ಲಿಸಿ ಒಂದು ಅಂಗಡಿಯ ಬಳಿ ನಿಂತು ನೋಡುತ್ತಿದ್ದಾಗ ಒಬ್ಬ ವ್ಯಕ್ತಿಯು ಒಂದು ಪ್ಲಾಸ್ಟಿಕ್ ಕವರ್ನಿಂದ ಏನೋ ವಸ್ತುಗಳನ್ನು ತೆಗೆದು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುವುದು ಕಂಡುಬಂತು. ಕೂಡಲೇ ದಾಳಿ ಮಾಡಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದುಕೊಂಡೆವು. ಚಾಸಾ-1 ರವರು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಆತನು ಹೆಸರನ್ನು ಪ್ರವೀಣ್ ಎಂದು ತಿಳಿಸಿದನು. ಚೀಲವನ್ನು ಪರಿಶೀಲಿಸಲಾಗಿ ಅದರಲ್ಲಿ 90 ಎಂ.ಎಲ್ ನ 17 ಒ.ಸಿ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಮತ್ತು 180 ಎಂ.ಎಲ್ ನ 7 ಒ.ಟಿ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಇದ್ದವು. ಸದರಿ ಮದ್ಯವನ್ನು ಮಾರಾಟ ಮಾಡಲು ಆರೋಪಿಯ ಬಳಿ ಯಾವುದೇ ಪರವನಾಗಿ ಇರಲಿಲ್ಲ. ಕಾರಣ ಚಾಸಾ-1 ರವರು ಸಂಜೆ 6-15 ರಿಂದ 7-15 ರ ಮದ್ಯದಲ್ಲಿ ಚಾಸಾ-2 ಮತ್ತು 3 ಇವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಮದ್ಯವನ್ನು ತಮ್ಮ ವಶಕ್ಕೆ ಪಡೆದುಕೊಂಡರು. ನಂತರ ಅವರು ಸರ್ಕಾರದ ತರ್ಫೆ ಪಿರ್ಯಾದಿಯನ್ನು ಕೂಡ ಕೊಟ್ಟಿರುತ್ತಾರೆ. ಇದೇ ರೀತಿ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ( ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದಾರೆ.) ಮು.ಮಾ-1 ನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ನಮಗೆ ಯಾವುದೇ ಭಾತ್ಮಿ ಬಂದಿಲ್ಲ. ನಾವು ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಮದ್ಯವನುನ ಮಾರಾಟ ಮಾಡುತ್ತಿರಲಿಲ್ಲ, ನಾವು ಆತನನ್ನು ಹಿಡಿದುಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಮತ್ತು ಆರೋಪಿಯಿಂದ ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ನನ್ನ ಮೇಲಾಧಿಕಾರಿ ಎಂದರೆ ಸರಿ. ಆ ಕಾರಣಕ್ಕೆ ಅವರು ಹೇಳಿದ ಹಾಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ

ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

ಸಿಸಿ ನಂಬರ್ **/202**

ಸಾಕ್ಷಿಯ ಹೆಸರು : ಸಿ.ಡಬ್ಯ್ಲ

ತಂದೆಯ ಹೆಸರು : ಪಿ.ಡಬ್ಲ್ಯ

ವಯಸ್ಸು : ವರ್ಷ

ಉದ್ಯೋಗ :

ವಾಸ ಸ್ಥಳ :

ದಿನಾಂಕಃ**04-10-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2019 ರಿಂದ 2024 ರವರೆಗೆ

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದ

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಮರುವಿಚಾರಣೆ **:** ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.